**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS 218/2021** **PW- 1**

ದಿಃ **04.03.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ ಪ್ರತಿವಾದಿ ನಂ. 2 ಮತ್ತು 3 ಪರ ಶ್ರಿ ಎಸ್ ಎಮ್ ಡಬ್ಲ್ಯೂ ವಕೀಲರಿಂದಃ**

ದಾವಾ ಆಸ್ತಿ ಮೂಲತಃ ನಮ್ಮ ಅಜ್ಜ ಶಿವಪ್ಪ ಇವರಿಂದ ನಮಗೆ ಬಂದಿರುತ್ತದೆ ಎಂದರೆ ಸರಿ. ಶಿವಪ್ಪ ತೀರಿಕೊಂಡ ನಂತರ ಸದರಿ ಆಸ್ತಿ ನಮ್ಮ ತಂದೆ ಈರಪ್ಪ ನೀಲಿ ಇವರ ಹೆಸರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಅವರ ಹೆಸರಿಗೆ ಬಂದಿರುತ್ತದೆ ಆದರೆ ಯಾವಾಗ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ.2 ದಾಖಲೆಯಲ್ಲಿ ಸಿಸ 161A/III ಕ್ಕೆ ಬರೆದಂತೆ ಎಂದು ಬರೆದಿದೆ ಎಂದರೆ ಸರಿ. ನನ್ನ ಅಜ್ಜ ಶಿವಪ್ಪನ ಹೆಸರಿನಲ್ಲಿ ಮೊದಲಿಗೆ 161 ಎ ಹಾಗೂ 161 ಬಿ ಎಂದು ಎರಡು ಆಸ್ತಿಗಳು ಇದ್ದವು ಎಂದರೆ ಸಾಕ್ಷಿ ನನಗೆ ಅಷ್ಟೊಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ.2 ದಾಖಲೆಯನ್ನು ನಾನು ಓದಿ ಹಾಜರುಪಡಿಸಿರುತ್ತೇನೆ. ನಿಪಿ.3 ರಲ್ಲಿ ಸಹ ಸಿ ಸ ನಂ.161 ಎ ಕ್ಕೆ ಬರೆದಂತೆ ಎಂದು ಬರೆದಿದೆ ಎಂದರೆ ಸರಿ. 1983 ರಲ್ಲಿ ಸಿ ಟಿ ಎಸ್ ಸಂಖ್ಯೆ 161 ಎ ಹಾಗೂ 161 ಬಿ ಆಸ್ತಿಗಳು ಪಾಲು ಆಗಿರುತ್ತವೆ. ಸಿ ಟಿ ಎಸ್ ನಂ.161 ಎ ಆಸ್ತಿ ನನಗೆ ಹಾಗೂ ನನ್ನ ತಂದೆ ಹಿಸ್ಸೆಗೆ ಬಂದಿರುತ್ತದೆ. ಸಿಟಿ ಎಸ್ ಸಂಖ್ಯೆ 161 ಬಿ ಆಸ್ತಿ ನನ್ನ ತಾಯಿ ಮನುದೇವಿ ನೀಲಿ ಇವರ ಹಿಸ್ಸೆಗೆ ಹೋಗಿರುತ್ತದೆ. 1983 ರಲ್ಲಿ ಪಾಲು ವಿಭಾಗ ಆದಾಗ ನಾನು ಇನ್ನು ಅಪ್ರಾಪ್ತ ವಯಸ್ಸಿನವನಿದ್ದೆನು. ಸದರಿ ಸಮಯದಲ್ಲಿ ಪ್ರತಿವಾದಿ ನಂ.2 ಮತ್ತು 3 ಸಹ ಅಪ್ರಾಪ್ತ ವಯಸ್ಸಿನವರು ಇದ್ದರು. 1983 ರಲ್ಲಿ ಆದ ಸದರಿ ವಿಬಾಗ ಪತ್ರವನ್ನು ನಾನು ನೋಡಿರುತ್ತೇನೆ ಹಾಗೂ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಅಂತಹ ಯಾವದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಂತಹ ಯಾವದೇ ವಿಬಾಗ ಪತ್ರ ಆಗಿಲ್ಲ ಹಾಗೂ ನಾನು ಆಗಿರುತ್ತದೆ ಎಂದು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಸಿಟಿ ಎಸ್ ಸಂಖ್ಯೆ 161 ಎ ಆಸ್ತಿಯಲ್ಲಿ ನನ್ನ ತಂದೆ 3060 ಚದರ ಅಡಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನೀವು ಹಾಗೂ ನಿಮ್ಮ ತಂದೆ ಸೇರಿ ಎಷ್ಟು ಆಸ್ತಿ ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿ ನಮ್ಮ ಕುಟುಂಬದ ಸೇರಿ ಮಾರಾಟ ಮಾಡಿರುತ್ತೇವೆ. 1995 ರಲ್ಲಿ ಜಿನ್ನಿಂಗ ಫ್ಯಾಕ್ಟರಿ ಇಡಿ ಕುಟುಂಬದ ಪರವಾಗಿ ಮಾರಾಟ ಮಾಡಿರುತ್ತೇವೆ. ಸದರಿ ಖರೀದಿ ಪತ್ರಕ್ಕೆ ನಾನು ಹಾಗೂ ನನ್ನ ತಂದೆ ಸಹಿ ಮಾಡಿರುತ್ತೇವೆ. ಸದರಿ ಸಮಯದಲ್ಲಿ ಪ್ರತಿವಾದಿ ನಂ.2 ಮತ್ತು 3 ಅಪ್ರಾಪ್ತ ವಯಸ್ಸಿನವರಾಗಿದ್ದು ಹಾಗಾಗಿ ಅವರು ಸಹಿ ಮಾಡಿಲ್ಲ. 2010 ರಲ್ಲಿ 3060 ಚದರ ಅಡಿ ಆಸ್ತಿಯನ್ನು ನಾನು ಹಾಗೂ ನನ್ನ ತಂದೆ ಸೇರಿ ಶೈಲಸ ಪಟೇಲ ಹಾಗೂ ಸೋನಲ ಪಟೇಲ ಇವರಿಗೆ ಮಾರಾಟ ಮಾಡಿರುತ್ತೇವೆ ಆದರೆ ಪ್ರತಿವಾದಿ ನಂ.2 ಮತ್ತು 3 ಸದರಿ ಖರೀದಿ ಪತ್ರಕ್ಕೆ ಸಮ್ಮತಿದಾರರಾಗಿ ಸಹಿ ಮಾಡಿರುತ್ತಾರೆ. ಸದರಿ ಸಮಯದಲ್ಲಿ ನಾವು ಪ್ರತಿವಾದಿ ನಂ.2 ಮತ್ತು 3 ಇವರಿಗೆ ಎಲ್ಲ ಆಸ್ತಿಯಲಿಲ 4 ಭಾಗ ಮಾಡಿದರೆ 4393 ಚದರ ಅಡಿ ಆಸ್ತಿಯಾಗುತ್ತದೆ ಹಾಗೂ ನಮ್ಮ ಹಿಸ್ಸೆಯ ಖರೀದಿಗೆ ಮಾತ್ರ ನೀವು ಸಹಿ ಮಾಡಿ ಎಂದು ಹೇಳಿ ನೀವು ಅವರ ಕಡೆಯಿಂದ ಖರೀದಿ ಪತ್ರಕ್ಕೆ ಸಮ್ಮತಿ ಸಾಕ್ಷಿದಾರರಾಗಿ ಸಹಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

3. ಸಿಟಿಎಸ್ ಸಂಖ್ಯೆ 161 ಎ, 1995 ರಲ್ಲಿ ಒಟ್ಟು 8947 ಚದರ ಅಡಿ ಇತ್ತು ಎಂದರೆ ಸರಿ. ಸಿಟಿಎಸ್ ಸಂಖ್ಯೆ 161 ಬಿ ಇದು 8627 ಚದರ ಅಡಿ ಇತ್ತು ಎಂದರೆ ಸಾಕ್ಷಿ ಇಲ್ಲ 9 ಗುಂಟೆ ಇತ್ತು ಎಂದು ನುಡಿಯುತ್ತಾರೆ. ಎರಡು ಆಸ್ತಿಗಳನ್ನು ಸೇರಿಸಿದರೆ 17574 ಚದರ ಅಡಿ ಆಗುತ್ತದೆ ಎಂದರೆ ನನಗೆ ಅಷ್ಟೊಂದು ಗೊತ್ತಿಲ್ಲ. ಸಿಟಿ ಎಸ್ ಸಂಖ್ಯೆ 161 ಎ ಮತ್ತು 161 ಬಿ ನಲ್ಲಿ ನಾನು ಹಾಗೂ ನನ್ನ ತಂದೆ ಆಗಲೇ ಮಾರಾಟ ಮಾಡಿದ ಭಾಗವನ್ನು ಕಡಿಮೆ ಮಾಡಿದರೆ ನನ್ನ ತಂದೆ ಹಿಸ್ಸೆಗೆ 828 ಚದರ ಅಡಿ ಹಾಗೂ ನನ್ನ ಹಿಸ್ಸೆಗೆ 2863 ಚದರ ಅಡಿ ಮಾತ್ರ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ಪ್ರತಿವಾದಿ ನಂ.2 ಮತ್ತು 3 ಇವರ ಹಿಸ್ಸೆಗೆ ತಲಾ 4393 ಚದರ ಅಡಿ ಬರುತ್ತದೆ ಎಂದರೆ ಸರಿ.

4. ಸರ್ವೆ ನಂ.161 ಎ/11 ನಲ್ಲಿ 1810 ಚದರ ಅಡಿಯ ಒಂದು ಅಕ್ಕಿ ಅಂಗಡಿ ಇದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಸಿಟಿಎಸ್ ನಂ.161 ಎ ಹಾಗೂ ಸರ್ವೆ ನಂ.161 ಎ/11 ರಲ್ಲಿ ಇರುವ ಅಕ್ಕಿ ಅಂಗಡಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿಯಲ್ಲ. ಈ ಎರಡು ಆಸ್ತಿ ಉತಾರಗಳಲ್ಲಿ ನನ್ನ ಹಾಗೂ ನನ್ನ ತಂದೆ ಹೆಸರು ಇದೆ. ನಾನು ಹಾಗೂ ನನ್ನ

ತಂದೆ ಸೇರಿ ಹೆಣ್ಣು ಮಕ್ಕಳಿಗೆ ಆಸ್ತಿ ಹೊಗಬಾರದು ಎಂಬ ಉದ್ದೇಶದಿಂದ ನನ್ನ ತಂದೆ ನನ್ನ ಜೊತೆ ಮಿಲಾಪೆಯಾಗಿ ನಾವು ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ಮತ್ತು 3 ಇವರಿಗೆ ಹಿಸ್ಸೆ ಕೊಡಬಾರದು ಎಂಬ ಉದ್ದೇಶದಿಂದ ಮೇಲೆ ಹೇಳಿದ ಆಸ್ತಿಗಳನ್ನು ಸೇರ್ಪಡೆ ಮಾಡಿಲ್ಲ ಎಂದರೆ ಸಾಕ್ಷಿ ಸರ್ವೆ ನಂ.161 ಎ/11 ರಲ್ಲಿ ನನ್ನ ತಂದೆ ಅವರಿಗೆ ಸೇರತಕ್ಕ ಅರ್ಧ ಹಿಸ್ಸೆ ಮಾರಾಟ ಮಾಡಿರುತ್ತಾರೆ ನನ್ನ ಹಿಸ್ಸೆ ಮಾತ್ರ ಉಳಿದಿದೆ ಎಂದು ನುಡಿಯುತ್ತಾರೆ. ಸರ್ವೆ ನಂ.161 ಎ/9 ಬಿ ರಲ್ಲಿ 50 sq yrd ನ ಒಂದು ಅಕ್ಕಿ ಅಂಗಡಿ ಮಾತ್ರ ಇದೆ ಎಂದು ನುಡಿಯುತ್ತಾರೆ. ಈ ಎರಡು ಆಸ್ತಿಗಳು ಮಾತ್ರ ಉಳಿದಿದೆ ಎಂದು ನುಡಿಯುತ್ತಾರೆ. ಈ ಎರಡು ಆಸ್ತಿಗಳು ಸಹ ಮೂಲತಃ ನಮ್ಮ ಅಜ್ಜನಿಂದ ಬಂದಿವೆ ಎಂದರೆ ಸರಿ. 161 ಎ ಮತ್ತು 161 ಬಿ ಆಸ್ತಿಯಲ್ಲಿ ಪ್ರತಿವಾದಿ ನಂ.2 ಮತ್ತು 3 ಇವರಿಗೆ ತಲಾ 1/4 ಹಿಸ್ಸೆ ಹಾಗೂ ನನಗೆ ಮತ್ತು ಪ್ರತಿವಾದಿ ನಂ.1 ಇವರಿಗೆ 1/4 ಹಿಸ್ಸೆ ಇದೆ ಎಂದರೆ ಸರಿಯಲ್ಲ. ಸಿಟಿ ಎಸ್ ಸಂಖ್ಯೆ 161 ಎ ಆಸ್ತಿಯ ದಾಖಲೆಗಳನ್ನು ನಾನು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಸದರಿ ಆಸ್ತಿ ಮಾರಾಟವಾಗಿರುತ್ತದೆ ಎಂದು ನುಡಿಯುತ್ತಾರೆ. ಸಿಟಿಎಸ್ ಸಂಖ್ಯೆ 161 ಎ ಹಾಗೂ ಸರ್ವೆ ನಂ.161 ಎ/11 ಆಸ್ತಿಗಳನ್ನು ಈ ದಾವೆಯಲ್ಲಿ ಸೆರ್ಪಡೆ ಮಾಡದೇ ಇರುವ ಕಾರಣ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

Sd/-
**(**ಶ್ರೀಮತಿ ದೀಪಾ ಜಿ ಮನೇರಕರ**)**
**3** ನೇ ಅಧಿಕ ಹಿ**.**ದಿ**.**ನ್ಯಾ**.**ಹುಬ್ಬಳ್ಳಿ**.**